ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.     PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 24.07.2024
ಮು. ಪಾಟಿ ಸವಾಲು : ಪ್ರತಿವಾದಿ ಪರ ವಕೀಲರಿಂದ

ನಾನು ಓದಿರುವುದಿಲ್ಲ. 2010 ರಲ್ಲಿ ನನ್ನ ಸಾಕ್ಷಿ ವಿಚಾರಣೆ ಆಗಿತ್ತು ಎಂದರೆ ಸರಿ. ನನ್ನ ತಂದೆ ಬದುಕಿರುತ್ತಾರೆ. ಸಾಕ್ಷಿ ವಿಚಾರಣೆ ಆದ ನಂತರ ನೀವು ನಿಮ್ಮ ತಂದೆ ಜೊತೆ ಎಷ್ಟು ವರ್ಷಗಳ ಕಾಲ ಚೆನ್ನಾಗಿ ಇದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ತಂದೆ ಜೊತೆ ಮಾತನಾಡಿ 20 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ನೀವು, ನಿಮ್ಮ ತಂದೆ ಮತ್ತು ನಿಮ್ಮ ಅಣ್ಣ ತಮ್ಮಂದಿರು ಒಂದೇ ಗ್ರಾಮದಲ್ಲಿ ವಾಸವಾಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಈ ದಾವೆಯು ಚಾಲ್ತಿಯಲ್ಲಿರುವಾಗ ನೀವು ಪ್ರತಿವಾದಿಯರ ಜೊತೆ ರಾಜಿ ಮಾತುಕತೆ ಮಾತನಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ನಿಮಗೂ ಮತ್ತು ನಿಮ್ಮ ಅಣ್ಣ ತಮ್ಮಂದಿರ ನಡುವೆ ಯಾವುದೇ ರಾಜಿ ಮಾತುಕತೆ ಒಪ್ಪಂದ ಆಗಿರುವುದಿಲ್ಲ ಎಂದರೆ ಸರಿ. 2010 ರಿಂದ ವ್ಯವಸ್ಥಾ ಪತ್ರದ ದಿಃ 22.09.2014 ವರೆಗೂ ನೀವು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಬಂದಿರುತ್ತೇವೆ ಎಂದು ನುಡಿಯುತ್ತಾರೆ.

ನೀವು, 4 ಮತ್ತು 6ನೇ ಪ್ರತಿವಾದಿಯರು ಚೆನ್ನಾಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಮಾತನಾಡುವುದಿಲ್ಲವೆಂದು ನುಡಿಯುತ್ತಾರೆ. 4 ಮತ್ತು 6ನೇ ಪ್ರತಿವಾದಿಯರು ಸಹ ನನ್ನ ಜೊತೆ ಮಾತನಾಡುವುದಿಲ್ಲ. ಹಂಪಾಪುರ ಚಂದ್ರು ನನಗೆ ಗೊತ್ತು. ನಮ್ಮೂರಿನ ಚಿಕ್ಕಹೈದೇಗೌಡರ ಮಗ ಕಾಳೇಗೌಡ ನನಗೆ ಗೊತ್ತಿರುವುದಿಲ್ಲ. 2014 ರಲ್ಲಿ ನೀವು ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ಯಾವುದಾದರೂ ದಾಖಲೆಗೆ ಸಹಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಹೇಳಿ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ನಿಮ್ಮ ಫೋಟೋ ಮತ್ತು ಸಹಿಗಳನ್ನು ತೆಗೆದುಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನಗೆ ಯಾರು ಏನು ಓದಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ನನ್ನ ಜೊತೆ ಯಾರು ಇರಲಿಲ್ಲ ನಾನು ಒಬ್ಬಳೇ ಇದ್ದೇನು ಎಂದು ನುಡಿಯುತ್ತಾರೆ. ನನ್ನನ್ನು ಉಪನೋಂದಣಾಧಿಕಾರಿಯವರ ಕಛೇರಿಗೆ ನನ್ನ ಅಣ್ಣನಾದ ಮಹದೇವ ರವರು ಕರೆದುಕೊಂಡು ಹೋಗಿರುತ್ತಾರೆ. ನಿಮ್ಮನ್ನು ಹೊರತುಪಡಿಸಿ

ಬೇರೆ ಯಾರು ಯಾರು ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ರುಜು ಹಾಕಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ನನಗೆ, 4 ಮತ್ತು 6 ನೇ ಪ್ರತಿವಾದಿಗೆ ತಲಾ ರೂ.2 ಲಕ್ಷಗಳನ್ನು ನೀಡಿ ನಮ್ಮಗಳ ಕಡೆಯಿಂದ ಹಕ್ಕು ಖುಲಾಸೆ ಪತ್ರವನ್ನು ಅವರ ಹೆಸರಿಗೆ ಬರೆಸಿಕೊಂಡಿರುತ್ತಾರೆಎಂದರೆ ಸರಿಯಲ್ಲ. ಆ ದಿನ ನನ್ನ ಅಣ್ಣ ತಮ್ಮಂದಿರು, ಸಾಕ್ಷಿದಾರರು ಸಹ ನೋಂದಣಾಧಿಕಾರಿಯವರ ಕಛೇರಿಯಲ್ಲಿ ಹಾಜರಿದ್ದು ನಮ್ಮೆರೆಲ್ಲಾ ಸಮಕ್ಷಮ ಹಕ್ಕು ಖುಲಾಸೆ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ನೀವು ಕೆಲವೊಂದು ಕಛೇರಿಗಳಲ್ಲಿ ಅರ್ಜಿಯನ್ನು ಸಲ್ಲಿಸಬೇಕಾದ ಸಂದರ್ಭದಲ್ಲಿ ಅರ್ಜಿಯನ್ನು ಬರೆಸಿಕೊಂಡು ನಂತರ ಅದನ್ನು ಓದಿ ತಿಳಿದುಕೊಂಡು ತದನಂತರ ಸಹಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆ ರೀತಿ ಎಲ್ಲಿಯೂ ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಹಕ್ಕು ಖುಲಾಸೆ ಪತ್ರದಲ್ಲಿ ಏನು ಬರೆದಿದೆ ಎಂದು ನೀವು ನಿಮ್ಮ ಅಣ್ಣ ತಮ್ಮಂದಿರ ಬಳಿ ವಿಚಾರಣೆ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ನನ್ನ ಸಹೋದರ, ನನ್ನ ತಂದೆ ಮತ್ತು ಪತ್ರ ಬರಹಗಾರರೆಲ್ಲಾರೂ ಸೇರಿ ಮೋಸ ಮಾಡಿದ್ದಾರೆಂದು ಬರೆಸಿದ್ದು ಅದಕ್ಕೆ ಸಂಬಂಧಿಸಿದಂತೆ ಏನಾದರೂ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ.

ಹಕ್ಕು ಖುಲಾಸೆ ಪತ್ರವಾದ 1-2 ತಿಂಗಳ ನಂತರ ನಾನು ಉಪನೋಂದಾಣಧಿಕಾರಿ ಕಛೇರಿಯಲ್ಲಿ ಅದರ ದೃಢೀಕೃತ ನಕಲು ಪ್ರತಿಯನ್ನು ಮನಗೆ ತೆಗೆದುಕೊಂಡು ಹೋಗಿ ನನ್ನ ಮಗನ ಹತ್ತಿರ ಓದಿಸಿ ತಿಳಿದುಕೊಂಡಿರುತ್ತೇನೆ. ನೀವು ಮತ್ತು ನಿಮ್ಮ ಅಕ್ಕ ತಂಗಿಯರು 1 ನೇ ಪ್ರತಿವಾದಿ ಕಡೆಯಿಂದ ಹಣವನ್ನು ಪಡೆದುಕೊಂಡಿದ್ದರೂ ಹೆಚ್ಚಿನ ಹಣವನ್ನು ಪಡೆಯುವ ದುರುದ್ದೇಶದಿಂದ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ